# Telephone conversation between Prime Minister and President of USA

June 02, 2020

---

## ಪ್ರಧಾನ ಮಂತ್ರಿ ಮತ್ತು ಅಮೆರಿಕಾ ರಾಷ್ಟ್ರಪತಿಯ ನಡುವೆ ದೂರವಾಣಿ ಸಂಭಾಷಣೆ

ಜೂನ್ 02, 2020

ಪ್ರಧಾನ ಮಂತ್ರಿ ನರೇಂದ್ರ ಮೋದಿ ಯವರು ಇಂದು ಅಮೆರಿಕಾ ಸಂಯುಕ್ತ ಸಂಸ್ಥಾನದ ರಾಷ್ಟ್ರಪತಿ ಡೊನಾಲ್ಡ್ ಟ್ರಂಪ್ ರವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು.

ರಾಷ್ಟ್ರಪತಿ ಟ್ರಂಪ್ ಯುಎಸ್ ಪ್ರೆಸಿಡೆನ್ಸಿ ಆಫ್ ಗ್ರೂಪ್ ಆಫ್ ಸೆವೆನ್ ಬಗ್ಗೆ ಮಾತನಾಡಿದರು ಮತ್ತು ಭಾರತ ಸೇರಿದಂತೆ ಇತರ ಪ್ರಮುಖ ದೇಶಗಳನ್ನು ಸೇರಿಸಲು ಅಸ್ತಿತ್ವದಲ್ಲಿರುವ ಸದಸ್ಯತ್ವವನ್ನು ಮೀರಿ ಗುಂಪಿನ ವ್ಯಾಪ್ತಿಯನ್ನು ವಿಸ್ತರಿಸುವ ಇಚ್ಛೆಯನ್ನು ತಿಳಿಸಿದರು. ಈ ಹಿನ್ನೆಲೆಯಲ್ಲಿ ಅವರು ಅಮೆರಿಕಾದಲ್ಲಿ ನಡೆಯಲಿರುವ ಮುಂದಿನ ಜಿ –7 ಸಭೆಯಲ್ಲಿ ಪಾಲ್ಗೊಳ್ಳುವಂತೆ ಪ್ರಧಾನ ಮಂತ್ರಿ ಮೋದಿಯವರಿಗೆ ಆಹ್ವಾನವನ್ನು ನೀಡಿದರು.

ರಾಷ್ಟ್ರಪತಿ ಟ್ರಂಪ್ ರವರ ಸೃಜನಶೀಲ ಮತ್ತು ದೂರದೃಷ್ಟಿಯ ವಿಧಾನಕ್ಕಾಗಿ ಪ್ರಧಾನ ಮಂತ್ರಿ ಮೋದಿ ಯವರು ಪ್ರಶಂಸಿಸಿದರು, ಇಂತಹ ವಿಸ್ತೃತ ವೇದಿಕೆಯು COVID ನಂತರದ ಪ್ರಪಂಚದ ಉದಯೋನ್ಮುಖ ವಾಸ್ತವಗಳಿಗೆ ಅನುಗುಣವಾಗಿರಲಿದೆ ಎಂಬ ಅಂಶವನ್ನು ಒಪ್ಪಿಕೊಂಡರು. ಉದ್ದೇಶಿತ ಸಭೆಯ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಅಮೆರಿಕಾ ಮತ್ತು ಇತರ ದೇಶಗಳೊಂದಿಗೆ ಕೆಲಸ ಮಾಡಲು ಭಾರತಕ್ಕೆ ಸಂತೋಷವಾಗಿದೆ ಎಂದು ಪ್ರಧಾನ ಮಂತ್ರಿಯವರು ಹೇಳಿದರು.

ಅಮೆರಿಕಾದಲ್ಲಿ ನಡೆಯುತ್ತಿರುವ ನಾಗರಿಕ ಅವಾಂತರಗಳ ಬಗ್ಗೆ ಪ್ರಧಾನ ಮಂತ್ರಿ ಮೋದಿಯವರು ಕಳವಳ ವ್ಯಕ್ತಪಡಿಸಿದರು ಮತ್ತು ಪರಿಸ್ಥಿತಿಯ ಶೀಘ್ರ ಪರಿಹಾರಕ್ಕಾಗಿ ತಮ್ಮ ಶುಭಾಶಯಗಳನ್ನು ತಿಳಿಸಿದರು.

ಇಬ್ಬರು ನಾಯಕರು ಎರಡು ದೇಶಗಳಲ್ಲಿನ COVID-19 ಪರಿಸ್ಥಿತಿ, ಭಾರತ–ಚೀನಾ ಗಡಿಯಲ್ಲಿನ ಪರಿಸ್ಥಿತಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ ಮುಂತಾದ ಇತರ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.

ರಾಷ್ಟ್ರಪತಿ ಟ್ರಂಪ್ ಈ ವರ್ಷದ ಫೆಬ್ರುವರಿಯಲ್ಲಿ ತಮ್ಮ ಭಾರತ ಭೇಟಿಯನ್ನು ಸಂತೋಷದಿಂದ ನೆನಪಿಸಿಕೊಂಡರು. ಈ ಭೇಟಿ ಅನೇಕ ಖಾತೆಗಳಲ್ಲಿ ಸ್ಮರಣೀಯ ಮತ್ತು ಐತಿಹಾಸಿಕವಾಗಿದೆ ಮತ್ತು ದ್ವಿಪಕ್ಷೀಯ ಸಂಬಂಧಕ್ಕೆ ಹೊಸ ಚೈತನ್ಯವನ್ನು ಸೇರಿಸಿದೆ ಎಂದು ಪ್ರಧಾನ ಮಂತ್ರಿ ಮೋದಿಯವರು ಹೇಳಿದರು.

ಸಂಭಾಷಣೆಯ ಅಸಾಧಾರಣ ಉಷ್ಣತೆ ಮತ್ತು ಪ್ರಾಮಾಣಿಕತೆಯು ಭಾರತ–ಅಮೆರಿಕಾ ಸಂಬಂಧಗಳ ವಿಶೇಷ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ, ಜೊತೆಗೆ ಇಬ್ಬರು ನಾಯಕರ ನಡುವಿನ ಸ್ನೇಹ ಮತ್ತು ಪರಸ್ಪರ ಗೌರವವನ್ನು ಪ್ರತಿಬಿಂಬಿಸುತ್ತದೆ.

**ನವ ದೆಹಲಿ**
**ಜೂನ್ 02, 2020**

DISCLAIMER: This is an approximate translation. The original is available in English on MEA's website and may be referred to as the official press release.